ಗಂಜಾಂ ನಾಗರಾಜ, ಮೈಸೂರು

'ಮಕ್ಕಳೇ ಮನೆಯ ಮಾಣಿಕ್ಯ' ಅಂತಾರೆ. 'ಮಂಗನ ಕೈಗೆ ಮಾಣಿಕ್ಯ ಕೊಟ್ಟಂತೆ' ಅಂತಾರೆ. ಮಂಗ ಯಾರು?



ಮೊಬೈಲ್, ಇಂಟರ್ನೆಟ್‌ನ ಗೀಳು ಹಚ್ಚುವ ಗೇಮ್‌ಗಳು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ತಾಳಿ ಕಟ್ಟುವುದಕ್ಕೂ, ಪಕ್ಷ ಕಟ್ಟುವುದಕ್ಕೂ ಏನು ವ್ಯತ್ಯಾಸ?

ಒಂದರಿಂದ ಸಂಗಜೀವನ, ಮತ್ತೊಂದರಿಂದ ಸಂಘಜೀವನ.

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

ವಯಸ್ಸಾದರೂ ರಾಜಕಾರಣಿಗಳು ಊರೂರು ಸುತ್ತುವರಲ್ಲ, ಅವರಿಗೆ ಸುಸ್ತು, ಸಂಕಟ ಏನೂ ಆಗುವುದಿಲ್ಲವೆ?

ಲೋಭಕ್ಕೆ ಸುಸ್ತು ಇರುವುದಿಲ್ಲ. ಬಯಸಿದ್ದು ಸಿಗದಿದ್ದರೆ ಮಾತ್ರ ಪ್ರಾಣಸಂಕಟ ನಿಶ್ಚಿತ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ

ಪ್ರೇಮಿಗಳು ಕತ್ತಲೆ ಜಾಗವನ್ನು ಹೆಚ್ಚು ಇಷ್ಟ ಪಡಲು ಕಾರಣವೇನು?



ನಿಶೆ ಇದ್ದಲ್ಲಿ ನಶೆ ಹೆಚ್ಚುವುದರಿಂದ.

ಪಿ. ಚಿದಾನಂದ, ಜವನಗೊಂಡನಹಳ್ಳಿ

ಸರ್ಕಾರಿ ಕೆಲಸಕ್ಕೆ ಇಂತಿಷ್ಟೇ ವಯಸ್ಸು, ವಿದ್ಯಾರ್ಹತೆ, ಅನುಭವ ನಿಗದಿಸಿರುವಂತೆ ಸರ್ಕಾರ ನಡೆಸುವ ಸಚಿವರುಗಳಿಗೇಕಿಲ್ಲ?

ಸೈಕಲ್ ನಿಯಮ; ಹಿಂದಿನ ಚಕ್ರಕ್ಕೆ ಚೈನು, ಡೈನಮೋ, ಸ್ಟ್ಯಾಂಡ್‌ಗಳ ಹೊಣೆ, ಮುಂದಿನ ಚಕ್ರ ಹೊಣೆರಹಿತ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಹೆಣ್ಣನ್ನು ಏಕೆ ಭೂಮಿಗೆ ಹೋಲಿಸುತ್ತಾರೆ?

ಭೂಮಿಯೂ ಪ್ರತಿದಿನ ಹೊಸದಾಗಿ ಅಲಂಕರಿಸಿಕೊಂಡು, ಹೂ ಮುಡಿದು, ಸುತ್ತಲು ಹೊರಡುವುದರಿಂದ.

ಜಿ.ಸ.ನಾ. ಶೆಟ್ಟಿ, ಹೊಸಪೇಟೆ

ಸಾಲ ಮನ್ನಾ, ಬಡ್ಡಿ ಮನ್ನಾ, ತೆರಿಗೆ ಮನ್ನಾ, ಶುಲ್ಕ ಮನ್ನಾ ಆಯಿತು. ಮುಂದೆ ಯಾವುದು ಮನ್ನಾ ಆಗಲಿದೆ?

ವೃದ್ಧಿ ಮನ್ನಾ, ಶುದ್ಧಿ ಮನ್ನಾ, ಕಡೆಗೆ ಬುದ್ಧಿಯೂ ಮನ್ನಾ.

ರಮೇಶ್, ಹನುಮನಾಳು

ನನ್ನನ್ನು ಕಂಡೊಡನೆ ನಮಸ್ಕಾರ ಎನ್ನುತ್ತಿದ್ದವ ಈಗ ಕಂಡರೂ ಕಾಣದಂತೆ ಹೋಗುವನಲ್ಲಾ.....?

ತಿಳಿಯಿತು. ಇನ್ನು ನೀವು ಕೊಟ್ಟ ಸಾಲದ ಆಸೆ ಬಿಡುವುದೇ ಉತ್ತಮ.

ರತ್ನಾ ಅಶೋಕ ಗೊರವರ, ಧಾರವಾಡ

ಪುರುಷರೂಪಿಗಳು ಹೆಂಗಸರ ಬಟ್ಟೆ ತೊಟ್ಟರೆ ಅವರನ್ನು ಗೇ ಎನ್ನುತ್ತಾರೆ. ಹೆಣ್ಣುಗಳು ಗಂಡಸರ ಬಟ್ಟೆ ತೊಟ್ಟರೆ?

ಹುಡುಗರು 'ಹಮ್ ಸಾಥ್ ಹೋಂಗೇ' ಎನ್ನುತ್ತಾರೆ.

ಪಿ. ಜಯವಂತ ಪೈ, ಕುಂದಾಪುರ

ದೇವಸ್ಥಾನಗಳಲ್ಲಿ ಗಂಡಸರೆಲ್ಲ ಹೆಂಡತಿಯ ಹೆಸರಲ್ಲೇ ಮಂಗಳಾರತಿ ಮಾಡಿಸುವುದೇಕೆ?

ಅವರ ಹೆಸರಿಗಷ್ಟೇ ಅಲ್ಲದೆ ಜನ್ಮಕ್ಕೂ ಮನೆಯಲ್ಲೇ ಮಂಗಳಾರತಿ ಆಗಿರುತ್ತದಲ್ಲ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಔಷಧವೇ ಇಲ್ಲದ ರೋಗ ಯಾವುದು?

ದುರಾಸೆ.

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ಫ್ಯೂಚರ್ ಶಾಕ್ ಒಂದನ್ನು ತಿಳಿಸಿ?

ಚೀನಾ ಕೊರೊನಾದ ಅಪ್ಪನಂತಹದ್ದನ್ನು ಛೂ ಬಿಡಲಿದೆಯಂತೆ!

ವಿದ್ಯಾ ಎನ್. ಪೈ, ಕಾಸರಕೋಡ

ಕನ್ನಡ ಭಾಷೆ ಅಳಿಯದೆ ಉಳಿಯುವುದು ಯಾವಾಗ?

ಕನ್ನಡದ ತಾಯಿಯರು ತಾವು ಮಮ್ಮಿಗಳಲ್ಲ, ಅಮ್ಮಂದಿರು ಎಂದು ಅರಿತು ನಡೆದಾಗ.

## ಬಹುಮಾನಿತ ಪ್ರಶ್ನೆ

ಈರಣ್ಣ ಐ. ದವಡಿ, ಹಳ್ಳದಕೇರಿ

ಶಾಲೆಯ ಪಕ್ಕ ಕೆಎಂಎಫ್‌ನ ಹಾಲಿನ ಹೊಳೆ ಹರಿಯುತ್ತಿದ್ದರೂ ಮಕ್ಕಳಿಗೆ ಪೌಡರ್ ಹಾಲು ಕೊಡುವ ಸರ್ಕಾರದ ನೀತಿ ಸರಿಯೆ?

ಸರಿಯೇ. ಸರ್ಕಾರಕ್ಕೆ ಏನು ಕೊಟ್ಟರೂ ಅದನ್ನು ಪುಡಿಪುಡಿ ಮಾಡುತ್ತದೆ ಎನ್ನುವುದರ ದ್ಯೋತಕವಿದು.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಮನವೆಂಬುದು ಮರ್ಕಟ. ತನು ಎಂಬುದು?

ಮರ್ಕಟ ಜಗ್ಗಾಡುವ ಕೊಂಬೆ.

ಫಾಲನೇತ್ರ ಸಜ್ಜನ, ಶಿರಸಿ

ಬನವಾಸಿ ದೇಶವನ್ನು ನೆನೆಯುವುದಕ್ಕೂ, ಅಂಕುಶಕ್ಕೂ ಏನು ಸಂಬಂಧ?

ಅಂಕುಶದ ಮೊನೆ ಚೂಪು. ಕವಿ ತನ್ನ ಮೆಮೊರಿಯೂ ಶಾರ್ಪ್ ಎಂದು ಹೇಳುತ್ತಿದ್ದಾನೆ.

ಬಿ. ಚಂದ್ರೇಗೌಡ, ಬೆಂಗಳೂರು

ಧ್ಯಾನಕ್ಕೂ, ಧಾನ್ಯಕ್ಕೂ ಏನು ಸಂಬಂಧ?



'ಯ'ಒತ್ತಿನ ಸಂಬಂಧ. ಎರಡೂ ಯಾವತ್ತೋ ಆರಂಭವಾಗಿ ಯಾವತ್ತಿಗೂ ಅವಶ್ಯವೆನಿಸುವಂತಹವೇ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಹೆಣ್ಣು ಸಂಸಾರದ ಕಣ್ಣು. ಗಂಡು?

ರೆಪ್ಪೆ.

ಮೈಸೂರು ಕುಸುಮ, ಶ್ರವಣಬೆಳಗೊಳ

ಅವಿದ್ಯಾವಂತರಾಗಿ, ಆರ್ಥಿಕ ಮುಗ್ಗಟ್ಟಿದ್ದರೂ ಇಡೀ ಸಂಸಾರ ನಿಭಾಯಿಸುವ ಹಳ್ಳಿಯ ಹೆಣ್ಣುಮಕ್ಕಳೇ ಸೂಪರ್. ಏನಂತೀರಿ?

ಬದುಕಲು ಕಲಿತವರೇ ಅಸಲಿ ವಿದ್ಯಾವಂತರು. ಮಿಕ್ಕವರು ಸರ್ಟಿಫಿಕೇಟ್‌ವಂತರಷ್ಟೆ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ರವಿಗೂ, ಕವಿಗೂ ಏನು ವ್ಯತ್ಯಾಸ ಸಾರ್?

ಕವಿ ಕಾವ್ಯಲೋಕದ ರವಿ; ರವಿ ಲೋಕದ ಬದುಕು ಬರೆಯುವ ಕವಿ.

■ ರಾಮ್